ಹೋಗಿತ್ತು, ಒಳಗ ಹೋಗಿ ಮತ್ತ ಎರಡು ಪೆಗ್ಗ ಹಾಕೇ ಹೊರಗ ಬಂದಾ. ಸಾವ್ಕಾರನ್ನ ನೋಡಿ ಬಹಿರೂಪಗಾರ ಮಂದೀ ಸಲಾಮ್ ಮಾಡಿದರು. ಸುತ್ತಲ ತ್ವಾಟದ ಮಂದಿ ಮಕ್ಕಳು ಸೇರಿ, ಆಟದ ಆರಂಭವನ್ನು ಕುತೂಹಲದಿಂದ ಕಾಯುತ್ತಿದ್ದರು. ಬಾಳುಕು ಮೊದಲ ಸೀತಾನ್ನ ನೋಡಿ ಒಪ್ಪಾರಿ ಮೀಸ್ಯಾಗ ಮುಗಳ್ನಕ್ಕ. ವೇಷಗಾರ ಮುಖ್ಯಸ್ಥ 'ಆಟಾ ಚಾಲೂ ಮಾಡೂನೇನ್ರೀ ಸಾವ್ಕಾರ, ಮಳಿ ಮಾಡಾ ಭಾಳ ಇಳದಾವ, ಮತ್ತ ನಾವು ದೌಡ ಊರ ಸೇರಬೇಕು' ಎಂದು ಕೇಳಿಕೊಂಡ.

ಬಾಳುಕುನ ಅನುಮತಿ ಪಡೆದ ನಂತರ ರಾಮಾಯಣದ ಸೀತಾಪಹರಣ ಸನ್ನಿವೇಶ ಮಾಡಾಕ ಸಿದ್ಧರಾದರು. ತಬಲಾ ಪೆಟಗಿಯವರು ನಾದ ಶುರುವಿಟ್ಟುಕೊಂಡರು. ಸೀತಾ 'ಚೆಂಗು ಚೆಂಗೆಂದು ಹಾರುವಾ. ರಂಗು ರಂಗಿನ ಈ ಜಿಂಕೆ..' ಹಾಡಿಗೆ ತಕ್ಕ ಹಾಗೆ ಕುಣಿದು ನೆರೆದ ಮಂದಿಯನ್ನು ಹುಚ್ಚೆಬ್ಬಿಸಿದಳು. ಆಟಾ ಆ ಮ್ಯಾಲ ಚಾಲೂ ಮಾಡ್ರಿ, ಇನ್ನೊಂದ ಹಾಡಾ ಹಾಡ್ರಿ ಅಂದಾಗ ಹಾಡಿನ ಸಂಗ್ರಹದ ಖಣಿಯೇ ಆಗಿದ್ದ ಈ ಮಂದಿ ತಡಮಾಡದೇ 'ಗಿಲ್ ಗಿಲ್ ಗಿಲಿ ಗಿಲ್ಲಕ್ , ಕಾಲು ಗೆಜ್ಜೆ ಝಣಕ್ಕ, ಕಯ್ಯ ಬಳೆ ಠಣಕ್ಕ, ರಂಗೆದ್ದಿತೋ, ನಿನ್ನ ಕಂಡು ಹಾಡಿ ಕುಣಿಯೋ ಗುಂಗೆದ್ದಿತೋ' ಎಂದು ಸಕಲ ವಾದ್ಯಗಳೊಂದಿಗೆ ಹಾಡಿ ಕುಣಿದು ಇಡೀ ಪ್ರೇಕ್ಷಕರ ಸೀಳೆ, ಕೇ ಕೇ ಮುಗಿಲು ಮಟ್ಟುವ ಹಾಗೆ ಕುಣಿದು ಕುಣಿದು ರಂಗೇರಿಸಿದರು. ಬಹಿರೂಪಗಾರರ ಹಾಡಿನ ಸಂಭ್ರಮಕ್ಕೆ ಮನಸೋತ ಜನ ಹರ್ಷೋದ್ಗಾರ ವ್ಯಕ್ತಪಡಿಸಿದರು. ಸೀಳೆ, ಕೇ ಕೇ, ಚಪ್ಪಾಳೆ ಹೀಗೆ ಸಕಲ ಶಬ್ದಗಳ ತುಂಬು ಸಂಭ್ರಮಕ್ಕೆ ವಿರಾಮ ನೀಡುವಂತೆ ಅದೆಲ್ಲಿತ್ತೊ ಮಳೆ , ದೊಡ್ಡ ದೊಡ್ಡ ಹನಿಗಳೊಂದಿಗೆ ಸುರಿಯ ತೊಡಗಿತು. ಎಲ್ಲಾ ಜನಾ ಚೆಲ್ಲಾಪಿಲ್ಲಿಯಾದರು, ಬಹಿರೂಪಗಾರರು ತಮ್ಮ ವಾದ್ಯ ಸಾಮಾನು ಸರಂಜಾಮುಗಳೊಂದಿಗೆ ಬಾಳುಕು ಸಾವ್ಕಾರನ ಪಡಸಾಲೆ ಹೊಕ್ಕರು. ಸಂಜೆ ಆರಂಭವಾದ ಮಳೆ ನಿಲ್ಲುವ ಯಾವ ಸೂಚನೆಯನ್ನೂ ನೀಡಲಿಲ್ಲ. ಪಾಳಿಯಂತೆ ಬರುತ್ತಿದ್ದ ಕರೆಂಟು ಮಳೆಗೆ ಕೈಕೊಟ್ಟು ಪಲಾಯನ ಗೈದಿದ್ದವು. ಚಿಮಣಿ ಬೆಳಕು, ಮತ್ತು ಗ್ಯಾಸ ಹಚ್ಚಿಟ್ಟು ಸಾವ್ಕಾರನ ಆಳುಗಳು ಬೆಳಕಿನ ವ್ಯವಸ್ಥೆ ಮಾಡಿದ್ದರು.

ಬಾಳುಕು ಬಹಿರೂಪಗಾರ ಮಂದಿಗೆ ಹೇಳಿದಾ 'ಇನ್ನೇನು ಮಳೆ ನಿಲ್ಲುವ ಹಾಗೆ ಕಾಣೋದಿಲ್ಲ, ಹ್ಯಾಗೂ ಇವತ್ತ ಇಲ್ಲೆ ತ್ವಾಟದಾಗ ವಸ್ತಿ ಮಾಡ್ರಿ, ಊಟದ ವ್ಯವಸ್ಥೆ ಮಾಡತ್ತೈತಿ, ಚೆಂದಾಗಿ ನಿದ್ದಿ ತಗದ ಬೆಳಗೂ ಮಂಜ್ಯಾನಿ ಊರಿಗಿ ಹೋಗುವಿರಂತ' ಅಂತಾ ಹೇಳಿದಾ, ಮತ್ತ ಸೀತಾಳ ಕಡೆ ಅದೇ ಮುಗಳ್ನಗೆ ಹರಿಬಟ್ಟಾ. ಅವರಿಗೂ ಅಷ್ಟೇ ಬೇಕಾಗಿತ್ತು. ಬಾಳುಕು ಸಾವ್ಕಾರ ತನ್ನ ಆಳುಗಳಿಗೆ ಹೇಳಿ ತ್ವಾಟದ ಖಾಲಿ ಬಿದ್ದಿದ್ದ ಬಾಣಂತಿ ಕೋಣೆಯನ್ನು ಸ್ವಚ್ಛಮಾಡಿಸಿದನು. ಮನಿ ಹೆಣಮಕ್ಕಳಿಗೆ ಅಡಗಿ ಮಾಡಾಕ ಆರ್ಡರ್ ಮಾಡಿದಾ.

ಬಹಳ ದಿನಗಳಿಂದ ಬಳಸದೇ ಬಿಟ್ಟಿದ್ದ ಬಾಣಂತಿ ಕೋಣೆಯಲ್ಲಿ ಹಾಸಿದ ತಾಡಪತ್ರಿ ಮೇಲೆ



ಬಹಿರೂಪಗಾರ ಮಂದಿ ಬಂದಿಳಿದು ಉಸ್ಸಪ್ಪಾ ಎಂದು ಸ್ವಲ್ಪ ವಿಶ್ರಮಿಸಿದರು, ಒಂದಿಬ್ಬರು ಬ್ಯಾಟರಿ ಇಸಿದುಕೊಂಡು ಜಿನುಗು ಮಳೆಯಲ್ಲಿಯೇ ಒಂದಕ್ಕೆ, ಎರಡಕ್ಕೆ ಹೋಗಿ ಬಂದರು, ಸೀತಾಳ ಗುಂಗಿನಲ್ಲಿದ್ದ ಬಾಳುಕು ತುಪ್ಪಾ ಜಾರಿ ರೊಟ್ಟಿಗೆ ಬಿತ್ತು ಎಂದು ಸಂಭ್ರಮಿಸಿದನು. ಬಾಳುಕುನ ಆಳುಗಳು ತ್ವಾಟದಾನ ಮನಿ ಮನಿಗಿ ಹೋಗಿ ವೇಷಗಾರ ಮಂದೀಗಿ ಉಣ್ಣಾಕ ತತ್ತಿ ಬೇಕಾಗ್ಯಾವ ಅಂತಾ ಹೇಳಿ ಡಜನ್ ಗಟ್ಟಲೆ ತತ್ತಿ ಗ್ವಾಳೆ ಮಾಡಿದರು. ಘಮ್ಮನ್ನಂಗ ವಾಸನಿ ಬರಾಂಗ ಸಾರ ಮಾಡಿದ್ರು, ಮನಿ ಹೆಣ್ಣ ಮಕ್ಕಳು ಕಲಾವಿದ ಮಂದಿಗಿ ಬಿಸಿ ಬಿಸಿ ರೊಟ್ಟಿ ಬಡದ್ರು. ಊಟದ ತಯ್ಯಾರಿ ಭಾಳಾ ಜೋರ ನಡೆದಿತ್ತು.

ಬಾಣಂತಿ ಕೋಣೆ ಹೊಕ್ಕ ಸೀತಾ ಮೈತುಂಬ ಸೆರಗ ಹೊತ್ತು ಬಾಳುಕುನ ಮುಂದೆ ಒಂದೆರಡು ಸಲ ಕ್ಯಾಟ್ ವಾಕ್ ಮಾಡಿ ಹೋದವಳು ಮತ್ತೆ ಗೂಡು ಸೇರಿ ಹೊರ ಬಂದಿರಲಿಲ್ಲ. ಬಾಳುಕು ಕಳ್ಳ ಬೆಕ್ಕಿನ ಹಾಗೆ ಸೀತಾಳ ಕೋಣೆಗೆ ಬಂದು ಹೋಗುತ್ತಿದ್ದ. ಹೊರಗಡೆ ಗವ್ವನೆ ಕತ್ತಲು, ಕಪ್ಪೆಗಳು ಚೀರುವ ಸೌಂಡು, ಈಗ ಏನಾಯಿತೋ ಏನೋ ಚಿಟ್ಟನೆ ಚೀರಿ ಬೊಬ್ಬೆ ಹಾಕುತ್ತಾ ಸೀತಾ ಹೊರಗೆ ಓಡಿ ಬಂದಳು. ಮೊದಲೇ ಕಾಳ ಹಾಕುವ ಬಾಳುಕು ಏನಾದರೂ ಮಾಡಿದ್ದಾನೆಂದು ಭಾವಿಸಿಕೊಂಡ ಆಳುಗಳು ಮತ್ತು ಬಹಿರೂಪಗಾರು ಹೌಹಾರಿ ಓಡಿಬಂದ್ರು, ಆದ್ರ ಬಾಳುಕು ಅಲ್ಲಿರಲಿಲ್ಲ, ತನ್ನ ಕೋಣೆಯಲ್ಲಿ ಬಹಿರೂಪಗಾರರ ಹಿರಿಯನೊಂದಿಗೆ ಒಂದಿಷ್ಟು ಪೆಗ್ಗು ಹಾಕುತ್ತಾ ಕುಳಿತಿದ್ದ, ಸೀತಾಳ ಚೀರಾಟಕ್ಕೆ ಬೆಚ್ಚಿ ಅವರೂ ಬಂದ್ರು, ಏನಾತ ಏನಾತು ಅಂತಾ ಜನ ಮುಕುರಿದರು, ಕಾಲು ತೋರಿಸುತ್ತಾ ನನಗೆ ಏನೋ ಕಡೀತು ಎಂದು ಬಾಣಂತಿ ಕೋಣೆ ಕಡೆ ಕೈ ಮಾಡಿದಳು, ತಡಮಾಡದೇ ಆಳುಗಳು ಬ್ಯಾಟರಿ ಹಿಡಿದು ಒಳ ಓಡಿದರು. ಸುತ್ತ ಹುಡುಕಿದಾಗ ಒಂದು ಕರೇ ಚೇಳು ಕಂಡಿತು, ಅದೆಲ್ಲಿತ್ತೋ ಸಿಟ್ಟು ಅದನ್ನು ಹೊಡೆದು ಹೊರ ತಂದರು, ಇತ್ತ ನೋವಿನ ಹೊಡೆತದಿಂದ ಚೀರುತ್ತಿದ್ದ ಸೀತೆಯನ್ನು ಸಮಾಧಾನ ಪಡಿಸುವುದೇ ಸಾಕು ಸಾಕಾಯಿತು. ತದಲಬಾಗಿ ಲಕ್ಕವ್ವಾ ನೀನೆ ಕಾಪಾಡು ಎಂದು ಜನಾ ಬೇಡಿಕೊಂಡರು.

ಮಗ್ಗಲು ತ್ವಾಟದ ಗಾವಂಠಿ ಗೌಡ್ರ ಮುತ್ಯಾನ ಕರಕೊಂಡು ಬಂದ್ರು. ಗೌಡ್ರ ಮುತ್ಯಾ ಅಂದ್ರ ಈ ಭಾಗದಾಗ ಹಾವು, ಚೇಳು ಕಡಿದ್ರ ಔಷಧ ಕೊಡಾಕ ಶಾಣ್ಯಾ ಇದ್ದ. ತನ್ನ ಪೆಟೀಗಿಯೊಂದಿಗೆ ಬಂದ ಮುತ್ಯಾ , ಸೀತಾಳ ಆರೈಕೆ ಮಾಡಿ ಆರಾಮ ಮಾಡಿದಾ, ಎಲ್ಲರೂ ನಿಟ್ಟುಸಿರು ಬಿಟ್ಟರು. ಸೀತಾಳ ಮೊಗದಲ್ಲಿನ ನಗು ಕಂಡು ಬಾಳುಕು ಕಿರುನಗೆ ನಕ್ಕು ಗೋಣು ಅಲ್ಲಾಡಿಸಿ ಅದೇನೋ ಸಂದೇಶ ಕೊಟ್ಟ.

ಹಸಿದು ಎಲ್ಲರ ಕಣ್ಣಲ್ಲಿ ಚುಕ್ಕಿ ಮೂಡಿದ್ದವು. ತತ್ತಿ ಸಾರಿನ ಊಟಾ ಸಿದ್ಧವಾಗಿತ್ತು. ಹೊಟ್ಟೆ ತುಂಬಾ ಉಂಡು ಎಲ್ಲರೂ ಅವರವರ ಕೋಣೆ ಸೇರಿದರು. ನಟ್ಟ ನಡುರಾತ್ರಿ ಬಾಳುಕುಗ ಎಚ್ಚರಾತು, ಎಚ್ಚರಾತು ಅನ್ನಾಕ ಏನೈತಿ ಅವನಿಗೆ ನಿದ್ದಿನೇ ಹತ್ತಿರಲಿಲ್ಲ. ಸೀತಾಳ ಸನಿಹ ಬಯಸಿ ಸಣ್ಣಗೆ ಬಾಣಂತಿ ಕೋಣೆಯೊಳಗೆ ಹೆಜ್ಜೆ ಹಾಕಿದಾ. ಹೊರಗೆ ಕಗ್ಗತ್ತಲು, ಮಳೆ ಬಿದ್ದು ಕಪ್ಪೆಗಳ ಗವ್ವನೆ ಸದ್ದು ಬಿಟ್ಟರೆ ಬೇರೆ ಸದ್ದಿಲ್ಲ. ಬಾಳುಕು ಕಳ್ಳ ಬೆಕ್ಕಿನ ಹೆಜ್ಜೆಯಿಟ್ಟು ಬಾಣಂತಿ ಕೋಣೆ ಪ್ರವೇಶಿಸಿದ ,ಅಲ್ಲಿ ಕೆಲವರು ತಲೆಗೆ ಟವೆಲ್ಲು ಸುತ್ತಿಕೊಂಡು, ಕೆಲವರು ಮುಸುಕು ಹಾಕಿಕೊಂಡು ಮಲಗಿದ್ದರು.

ಮಲಗಿದವರಲ್ಲಿ ಸೀತಾಳನ್ನು ಹುಡುಕುವ ಗೊಂದಲ್ಲಕ್ಕೆ ಬಿದ್ದಾ. ಏಳೆಂಟು ಜನರಲ್ಲಿ ಈ ಸೀತಾ ಎಲ್ಲಿ ಮಲಗಿದ್ದಾಳೆಂದು ಮತ್ತೆ ಮತ್ತೆ ಕಣ್ಣು ದೊಡ್ಡದಾಗಿ ಮಾಡಿ ನೋಡಿದಾ, ಹೆಣಮಗಳ ಬ್ಯಾರೆ ಮಲಗ ಬೇಕಾಗಿತ್ತು, ಇಲ್ಲಿ ನೋಡಿದರ ಎಲ್ಲಾರೂ ಕೂಡೇ ಮಲಗ್ಯಾರ ಎಂದು ಕೈ ಕೈ ಹಿಚಿಕಿಕೊಂಡ. ಕೈಯಾನ ಬ್ಯಾಟರಿ ಸುತ್ತಲ ಹಚ್ಚಿ ಸಣ್ಣಗೆ ಕಣ್ಣಾಡಿಸಿದಾ, ಒಂದು ಗೂಟಕ್ಕೆ ಸೀತಾಳ ಸೀರೆ ಕಂಡಿತು.ಅದರ ಮೇಲಷ್ಟು ಕೈಯಾಡಿಸಿ ಖುಷಿಗೊಂಡ. ಮತ್ತೆ ನಿಧಾನಕ್ಕೆ ಒಬ್ಬಬ್ಬರ ಮುಖದ ಮೇಲೆ ಬ್ಯಾಟರಿ ಬಿಟ್ಟು ನೋಡಿದಾ, ತಲೆಗೆ ಟವೆಲ್ಲು ಸುತ್ತಿ ಮಲಗಿದ್ದ ಅವರಲ್ಲಿ ಉದ್ದನೆಯ ಕೂದಲ ಇಳಿಬಿಟ್ಟ ಸೀತಾ ಕಾಣದೇ ಕಂಗಾಲಾದ. ಮತ್ತೆ ಎಲ್ಲ ಕಡೆ ತನ್ನ ಬ್ಯಾಟರಿ ಬಿಟ್ಟ. ತಬಲಾ ಪೆಟಗಿ, ಬಿಲ್ಲು ಬಾಣ ಎಲ್ಲಾ ಮೂಲ್ಯಾಗ ಒಟ್ಟಿ ಮಲಗಿದ್ದರು. ಸಣ್ಣ ಸಂದಕದ ಮ್ಯಾಲ ಕರಿ ಕೂದಲದ ಜಡಿ ಕಂಡಿತು. ಇದೇನಿದು ಅಂತಾ ಎತ್ತಿ ನೋಡಿದಾ, ಅದು ಸೀತಾಳ ಜಡಿಯಾಗಿತ್ತು. ಗಾಬರಿಗೆ ಬಿದ್ದಾ. ಇದೇನಿದು ಸೀತಾಳ ಕೂದಲಾ ಅಂದು ಆಕಾಶ ನೋಡಿದಾ,ಎಇದೇ ಕೂದಲಕ್ಕೆ ಅಲ್ವಾ ನಾನು ಹಾಡಿ ಹೊಗಳಿದ್ದು ಅಂದಾ. ಅಯ್ಯೋ ಮೋಸ ಆಯ್ತು ಅಂತಾ ತಲೆ ತಲೆ ಜಜ್ಜಿಕೊಂಡಾ. ಸೀತಾ ಹೆಣ್ಣ ಅಲ್ಲಾ ಅದು ಗಂಡ ಐತಿ ಎಂದು ಖಾತ್ರಿಪಡಿಸಿಕೊಂಡ. ಪೂರ್ಣ ನಿಶೆ ಇಳಿದು ಹೋಗಿತ್ತು, ಅದ ಕಳ್ಳ ಹೆಜ್ಜೆಲಿ ಹೊರಗ ಬಂದಾ, ಇದನ್ನ ಒಂಟಿಗಣ್ಣಲೇ ಕದ್ದ ನೋಡತಿದ್ದ ಸೀತಾನ ಪಾತ್ರಧಾರಿ ಮನಸಿನ್ಯಾಗ ಮುಸಿಮುಸಿ ನಕ್ಕು ಹೊಡಮರಳಿ ಮಲಗಿದಾ. ನಸುಕು ಹರಿದಾಗ ಬಹಿರೂಪಗಾರ ಮಂದಿ ಬಾಳುಕುನ ಪುರಾಣಕ್ಕ ಮಂಗಳ ಹಾಡಿ, ಅವನಿಂದ ಕಾಳು ಕಡಿ, ಕುರಿಮರಿ ತುಗೊಂಡು ಮುಂದಿನ ಊರಿಗಿ ಹ್ವಾದರು.

ಪ್ರತಿಕ್ರಿಯಿಸಿ: **feedback@sudha.co.in**